ದಿನಾಂಕಃ 04-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

1) ನಾನು ಏಳನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿದ್ದರೂ ಏಳನೇ ತರಗತಿವರೆಗೆ ವಾಸಂಗ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ನನ್ನ ಬ್ಯಾಂಕಿನ ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಕಂಡು ಬರುವ ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿ. ನಿಪಿ-5 ಅಂಚೆ ಲಕೋಟೆಯಲ್ಲಿ ನಮೂದು ಮಾಡಿರುವ ವಿಳಾಸ ನನ್ನದೇ ಆಗಿರುತ್ತದೆ ಎಂದರೆ ಸರಿ. ನಾನು ಅಂಗನವಾಡಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ.

2) ದಿಃ 13-08-2024 ರಂದು ದೂರುದಾರರಿಂದ ಮೂರು ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ದೂರುದಾರರಿಂದ ಹತ್ತು ಸಾವಿರ ಹಣವನ್ನು 2023 ನೇ ಸಾಲಿನಲ್ಲಿ ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ನಾನು ದೂರುದಾರರಿಂದ ಮೂರು ಲಕ್ಷ ಹಣವನ್ನು ಪಡೆದುಕೊಂಡಿದ್ದರೂ ಸಹ ಹತ್ತು ಸಾವಿರ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂರು ಲಕ್ಷ ರೂ ಮರುಪಾವತಿಗಾಗಿ ನಿಪಿ-1 ಚೆಕ್ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ಚೆಕ್ಕು ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿಃ 23-10-2024 ರಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 23-10-2024 ರಲ್ಲಿ ನನ್ನ ಬ್ಯಾಂಕಿನಲ್ಲಿ ಸಾಕಷ್ಟು ಹಣ ಇತ್ತು ಎಂದು ತೋರಿಸಲು ದಾಖಲೆ ಇರುವುದಿಲ್ಲ.

3) ಚೆಕ್ ಅಮಾನ್ಯಗೊಂಡ ನಂತರ ದೂರುದಾರರು ನನ್ನ ವಿಳಾಸಕ್ಕೆ ತಿಳುವಳಿಕೆ ಪತ್ರ ನೀಡಿದ್ದು ಸದರಿ ತಿಳುವಳಿಕೆ ಪತ್ರವನ್ನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಗುಂಪು ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ